ಸಾಕಷ್ಟು ಬಾರಿ ಪ್ರಯತ್ನಿಸಿದ್ದೆ. ಆದರೆ ಮುಚ್ಚಿದ ಕಣ್ಣಿನ ಕಡೆಯ ತುಟಿಯಿಂದಲೇ ನನಗೆ ನಗಲು ಸಾಧ್ಯವಾಗುತ್ತಿತ್ತು. ಅವನು ತನ್ನ ಎರಡು ಬೆರಳುಗಳ ಮಧ್ಯೆ ನಾಣ್ಯವನ್ನು ತಿರುಗಿಸುವ ರೀತಿಗಾಗಲಿ, ಬ್ರೇಕ್ ಡ್ಯಾನ್ಸ್ ಮಾಡುವಾಗಿನ ಅವನ ಮೈ ಬಳುಕುವಿಕೆಗಾಗಲಿ ಆಕೆಗೆ ಮಹತ್ವದ್ದಾಗಿ ತೋರುತ್ತಿರಲಿಲ್ಲ. ನನಗೆ ಅವು ಮುಖ್ಯವಾದಷ್ಟು ಆಕೆಗೆ ಮುಖ್ಯವಾಗುತ್ತಿರಲಿಲ್ಲ.

"ಅವನ ಜೊತೆ ನೀನು ಸೇರಬೇಡ" ಎಂದು ಎಚ್ಚರಿಕೆಯನ್ನು ಕೊಟ್ಟಿದ್ದಳು. "ನಂಗೆ ಯಾರೂ ಗೆಳೆಯರೇ ಇಲ್ಲ. ನಾನಾದ್ರೂ ಏನು ಮಾಡಲಿ? ಅಷ್ಟಕ್ಕೂ ನಾನು ಕ್ಲಾಸಿನಲ್ಲಿ ಯಾವತ್ತೂ ಐದನೇ ರ್‍ಯಾಂಕಿನ ಒಳಗೇ ಇರ್ತೀನಿ. ಅಂದ ಮೇಲೆ ಏನು ವ್ಯತ್ಯಾಸ ಆಗ್ತದೆ? ಎಲ್ಲಾ ಸ್ನೇಹಿತರೂ ಅವನ ಜೊತೆ ಸೇರ್ತಾರೆ. ಸಂಜೀವ ಕೂಡಾ ಬರ್ತಾನೆ. ನನ್ನ ಪಾಡಿಗೆ ನನ್ನ ಬಿಟ್ಟು ಬಿಡು" ಎಂದು ಕೊಸರುತ್ತಿದ್ದೆ. ಆ ಮಾತುಗಳು ಸ್ವಲ್ಪಮಟ್ಟಿಗೆ ಅವರಿಗೆ ಸಮಾಧಾನ ಕೊಡುತ್ತಿದ್ದವು. ಸಂಜೀವ ಎಂದರೆ ಒಳ್ಳೆಯ ಹುಡುಗ ಎಂದು ಅವರಿಗೆ ಗೊತ್ತಿತ್ತು. "ಸಂಜೀವ ಕೂಡಾ ಜೊತೆಯಲ್ಲಿ ಇದ್ದರೆ ಅಡ್ಡಿಯಿಲ್ಲ" ಎಂದು ಅಮ್ಮ ನಿಟ್ಟುಸಿರು ಬಿಡುತ್ತಿದ್ದಳು.

ರಾಮ್ ಹಾಗೂ ಇನ್ನೊಬ್ಬ ಹುಡುಗ, ಅವನ ಹೆಸರು ನನಗೆ ಮರೆತು ಹೋಗಿದೆ, ಯಾವಾಗ ನಮ್ಮ ಜೊತೆ ಸೇರುವುದು ನಿಲ್ಲಿಸಿ ಬಿಟ್ಟರು ಎಂದು ಸರಿಯಾಗಿ ನೆನಪಿಲ್ಲ. ಕೊನೆಗೆ ನಾನು, ಸಂಜೀವ ಮತ್ತು ರಿಚಿ ಮಾತ್ರ ಸೇರುತ್ತಿದ್ದೆವು.

ಒಂದು ಸುಡುಸುಡುವ ಬೇಸಿಗೆಯ ದಿನ, ನಾವು ಮೂರೂ ಜನ ರಿಚಿಯ ಮನೆಯಲ್ಲಿ ಸೇರಿದ್ದೆವು. ಅವರ ಕೆಲಸದಾಳು ತನ್ನ ಕೋಣೆಯಲ್ಲಿ ಗೊರಕೆ ಹೊಡೆಯುತ್ತಿದ್ದ. ಅವನ ಅಪ್ಪ ಅಮ್ಮ ಯಾವತ್ತಿನಂತೆ ಯಾವುದೋ ಪ್ರಯಾಣದಲ್ಲಿದ್ದರು. ಆ ದಿನ ತಡರಾತ್ರಿಗೆ ಅವರು ಬರುವವರಿದ್ದರು.

ರಿಚಿ ಅವರಪ್ಪನ ಪ್ಯಾಕ್‌ನಿಂದ ಸಿಗರೇಟೊಂದನ್ನು ಸೇದಿ ಮುಗಿಸಿದ. ನಾನು ಬಿಟ್ಟಗಣ್ಣಿಂದ ನೋಡಿದೆ. ನಾವು ಯಾರೂ ಸಿಗರೇಟು ಸೇದಿರಲಿಲ್ಲ. ಅವನದು ಭಂಡ ಧೈರ್ಯವಾಗಿತ್ತು. "ನಿಂಗೊಂದು ಬೇಕೇನೋ?" ಎಂದು ಅವನು ಸಂಜೀವನಿಗೆ ಕೇಳಿದ; ಬೇಡವೆಂದ. ರಿಚಿ ಬಲವಂತ ಮಾಡಲಿಲ್ಲ. ಎರಡು ಬೆರಳುಗಳ ಮಧ್ಯದಲ್ಲಿ ಸಿಗರೇಟು ಹಿಡಿದ ಅವನು ಸಿನಿಮಾ ನಾಯಕನಟನಂತೆ ಕಂಡ. ಸಿಗರೇಟಿನ ಹೊಗೆ ಹಗೂರಕ್ಕೆ ಗಾಳಿಯಲ್ಲಿ ತೇಲುತ್ತಿರುವಾಗ, ಅದರ ಮಧ್ಯದಲ್ಲಿಯೇ ಅವನ ಮಾತುಗಳು ನುಸುಳುತ್ತಿದ್ದವು. ಕೆಲವು ಹೊಗೆಯ ಉಂಗುರಗಳನ್ನೂ ಅವನು ಹೊರ ಹಾಕಿದ. ಸಂಜೀವನಿಗೆ ವಿಪರೀತ ಕೆಮ್ಮು ಶುರುವಾಗಿ, ಮನೆಗೆ ಹೋಗ್ತೀನಿ ಅಂತ ಹೇಳಿದ.

"ಓಹ್, ಇನ್ನಷ್ಟು ಹೊತ್ತು ನಾವೆಲ್ಲಾ ಜೊತೆಯಾಗಿ ಇರಬೋದು ಅಂದುಕೊಂಡಿದ್ದೆ. ಬೇಕಂದ್ರೆ ಸಿಗರೇಟ್ ಸೇದೋದು ನಿಲ್ಲಿಸ್ತೀನಿ" ಎಂದು ರಿಚಿ ನಿರಾಸೆಯಿಂದ ಹೇಳಿದ. ಸಂಜೀವ್ ಇನ್ನಷ್ಟು ಕೆಮ್ಮಿ, "ಹಂಗೇನೂ ಇಲ್ಲ. ನಾನು ಹೋಗಲೇ ಬೇಕು. ಆಮೇಲಕ್ಕೆ ಸಿಗ್ತೀನಿ" ಎಂದು ಹೊರಟೇ ಬಿಟ್ಟ. ರಿಚಿ ನನ್ನ ಕಡೆಗೆ ನೋಡಿದ. "ನೀನೇನು ಮಾಡ್ತೀಯಾ? ನೀನೂ ಹೋಗಲ್ವಾ?" ಎಂದ. ನಾನು ಭುಜವನ್ನು ಕುಣಿಸಿ "ನಂಗೇನೂ ಕೆಲಸ ಇಲ್ಲ" ಅಂದೆ. ಅವನೂ ಭುಜ ಕುಣಿಸಿ ನಕ್ಕು "ಒಂದು ಕೆಲಸ ಮಾಡೋಣ. ನನ್ನ ಹತ್ತಿರ ಹೊಸ ಫ್ಯಾಂಟಮ್ ಕಾಮಿಕ್ಸ್ ಪುಸ್ತಕ ಅವೆ. ನಾವಿಬ್ಬರೂ ಆರಾಮಾಗಿ ಹಾಡು ಕೇಳ್ತಾ, ಪುಸ್ತಕ ಓದಿಕೊಂಡು ಮಜಾ ಮಾಡೋಣ. ಹೆಂಗೆ?" ಎಂದು ಕೇಳಿದ. ನಾನು ಉತ್ಸಾಹದಿಂದ ಗೋಣು ಹಾಕಿದೆ. ಅವನು ತನ್ನ ಸಿಗರೇಟನ್ನು ಆರಿಸಿ, ಒಂದಿಷ್ಟು ಇಂದ್ರಜಾಲ ಕಾಮಿಕ್ಸ್ ಪುಸ್ತಕಗಳ ಕಟ್ಟನ್ನು ಹೊರತೆಗೆದ. ಅವನ ಹಾಸಿಗೆಯ